ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 02-05-2017

## ಪತ್ರಿಕಾ ಆಮಂತ್ರಣ

1. **ಪತ್ರಿಕಾಗೋಷ್ಠಿ:**

ಲಾಲ್‌ಬಾಗ್‌ನಲ್ಲಿ ಮಾವು ಪ್ರದರ್ಶನ ಮತ್ತು ಮಾರಾಟ ಮೇಳ:

ದಿನಾಂಕ: 03-05-2017, ಬುಧವಾರ, ಸಮಯ: 11.30 ಗಂಟೆಗೆ

ಸ್ಥಳ: ಮೈಸೂರು ಉದ್ಯಾನ ಕಲಾ ಸಂಘ (ಎಂಹೆಚ್‌ಎಸ್) ಎಮ್. ಹೆಚ್. ಮರೀಗೌಡ ಭವನ, ಲಾಲ್‌ಬಾಗ್, ಬೆಂಗಳೂರು

## ಪತ್ರಿಕಾ ಪ್ರಕಟಣೆ

## ಮಲ್ಟಿಪ್ಲೆಕ್ಸ್ ಗರಿಷ್ಠ ದರ 200 ರೂ. ನಿಗದಿ

ಬೆಂಗಳೂರು, ಮೇ 2 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿನ ಮಲ್ಟಿಪ್ಲೆಕ್ಸ್‌ಗಳು ಸೇರಿದಂತೆ ಎಲ್ಲಾ ಚಿತ್ರಮಂದಿರಗಳಲ್ಲಿ ಏಕರೀತಿಯ ಪ್ರವೇಶ ದರ ನೀತಿ ಜಾರಿಯನ್ವಯ ಸಿನಿಮಾ ಮಂದಿರಗಳ ಪ್ರವೇಶ ದರದ ಗರಿಷ್ಠ ಮಿತಿಯನ್ನು ತೆರಿಗೆ ಹೊರತುಪಡಿಸಿ ರೂ. 200 ಗಳಿಗೆ ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕದಲ್ಲಿ ಪ್ರದರ್ಶನಗೊಳ್ಳುವ ಎಲ್ಲಾ ಭಾಷೆಯ ಚಲನಚಿತ್ರಗಳಿಗೆ ಈ ದರ ಅನ್ವಯಿಸುತ್ತದೆ. ಹಾಗೂ ರೂ. 200 ಗಳ ಗರಿಷ್ಠ ಮಿತಿಯು ಮಲ್ಟಿಪ್ಲೆಕ್ಸ್‌ಗಳಲ್ಲಿ ಗೋಲ್ಡ್‌ಕ್ಲಾಸ್

**ಸ್ಕ್ರೀನ್ ಮತ್ತು ಗೋಲ್ಡ್‌ಕ್ಲಾಸ್ ಸೀಟುಗಳನ್ನು ಒಟ್ಟು ಸೀಟುಗಳ ಶೇ. 10 ರಷ್ಟು ಮೀರದಂತೆ ಹೊರತುಪಡಿಸಲಾಗಿದೆ.**

**ಐ-ಮಾಕ್ಸ್ ಮತ್ತು 4 ಡಿ ಎಕ್ಸ್ ಚಿತ್ರಮಂದಿರಗಳನ್ನು ಗರಿಷ್ಠ ಪ್ರವೇಶ ದರ ಮಿತಿಯಿಂದ ಹೊರತುಪಡಿಸಿ ಸರ್ಕಾರಿ ಆದೇಶ ಹೊರಡಿಸಲಾಗಿದೆ.**

## <u>ಮೇ 8 ರಂದು ಆರು ಜಿಲ್ಲೆಗಳಲ್ಲಿ ನಾಲ್ಕನೇ ಹಂತದ ಇಂದ್ರಧನುಷ್ ಅಭಿಯಾನಕ್ಕೆ ಚಾಲನೆ – ಡಾ. ಶಾಲಿನಿ ರಜನೀಶ್</u>

ಬೆಂಗಳೂರು, ಮೇ 2 (ಕರ್ನಾಟಕ ವಾರ್ತೆ)

ನಾಲ್ಕನೇ ಹಂತದ ಇಂದ್ರಧನುಷ್ ಅಭಿಯಾನ ಇದೇ 8 ರಂದು ಆರು ಜಿಲ್ಲೆಗಳಲ್ಲಿ ಆರಂಭವಾಗಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ತಿಳಿಸಿದರು.

ವಿಕಾಸಸೌಧದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಅವರು ಮಾತನಾಡಿ ಗರ್ಭಿಣಿಯರು, 0–2 ವರ್ಷ ವಯೋಮಾನದ ಒಳಗಿನ ಹಾಗೂ 5 ರಿಂದ 6 ವರ್ಷದ ಅಪೂರ್ಣ ಲಸಿಕೆ ಪಡೆದಿರುವ ಮಕ್ಕಳಿಗೆ ಕಾಲಕಾಲಕ್ಕೆ ಲಸಿಕೆಗಳನ್ನು ನೀಡಲಾಗುವುದು ಎಂದರು.

ಮೇ ತಿಂಗಳ 8 ರಂದು ಬೆಂಗಳೂರು ನಗರದ ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಳಗಾವಿ, ಕಲಬುರಗಿ, ವಿಜಯಪುರ, ಮೈಸೂರು ಮತ್ತು ತುಮಕೂರು ಜಿಲ್ಲೆಗಳಿಗೆ ಹೆಚ್ಚಿನ ಆದ್ಯತೆ ನೀಡಿ, ಗರ್ಭಿಣಿಯರನ್ನು ಪತ್ತೆ ಹಚ್ಚಿ ಲಸಿಕೆ ಹಾಕಲಾಗುವುದು. ಇಲಾಖೆಯ ಆರೋಗ್ಯ ಕಾರ್ಯಕರ್ತರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಈ ಕುರಿತು ಹೆಚ್ಚಿನ ತರಬೇತಿ ನೀಡಿ ಸಜ್ಜುಗೊಳಿಸಲಾಗಿದೆ ಎಂದು ಡಾ. ಶಾಲಿನಿ ರಜನೀಶ್ ಅವರು ರಾಜ್ಯ, ಜಿಲ್ಲಾ ಮತ್ತು ನಗರ ಪ್ರದೇಶಗಳಲ್ಲಿ ಕಾರ್ಯಪಡೆ ಸಮಿತಿ ರಚಿಸಿ ಈ ಕುರಿತು ವಿವಿದ ಹಂತಗಳ ಅಧಿಕಾರಿಗಳಿಗೆ ಮಾಹಿತಿ ನೀಡಿ ಸಮನ್ವಯ ಪಡೆದು ಯಶಸ್ವಿಗೊಳಿಸಲಾಗುವುದು ಎಂದರು.

ಮೇ, ಜೂನ್, ಜುಲೈ ಮತ್ತು ಆಗಸ್ಟ್ ಸೇರಿದಂತೆ ನಾಲ್ಕು ತಿಂಗಳ ಕಾಲ ಇಂದ್ರಧನುಷ್ ಅಭಿಯಾನದಡಿ ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ

ಲಸಿಕೆಗಳನ್ನು ಹಾಕಲು ವಿಶೇಷ ಕಾರ್ಯಕ್ರಮಗಳನ್ನು ಅಣಿಗೊಳಿಸಲಾಗಿದೆ ಎಂದ ಅವರು ಇಂದ್ರಧನುಷ್ ಕಾರ್ಯಕ್ರಮಕ್ಕೆ ಒಳಪಡುವ ಕೊಳಚೆ ಮತ್ತು ವಲಸೆ ಪ್ರದೇಶ, ಅಲೆಮಾರಿ ಪ್ರದೇಶ, ಇಟ್ಟಿಗೆ ಕಾರ್ಖಾನೆ, ಕಟ್ಟಡ ನಿರ್ಮಾಣ ಪ್ರದೇಶ ಸೇರಿದಂತೆ ಐದು ಹಂತದಲ್ಲಿ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುವುದು ಎಂದರು.

ಮೇ ತಿಂಗಳಲ್ಲಿ ಏಳು ದಿನಗಳ ಕಾಲ ಅಂದರೆ 8 ರಿಂದ 19ನೇ ತಾರೀಖಿನ ಒಳಗಾಗಿ ಲಸಿಕೆಗಳನ್ನು ಗರ್ಭಿಣಿ, ಮಕ್ಕಳಿಗೆ ಲಸಿಕೆ ಹಾಕುವ ಕಾರ್ಯಕ್ರಮಗಳು ಪೂರ್ಣಗೊಂಡಿವೆ. ಇದರ ಜೊತೆಗೆ ವಿವಿಧ ಸರ್ಕಾರೇತರ ಸಂಸ್ಥೆಗಳ ಸಹಕಾರವನ್ನು ಸಹ ಪಡೆಯಲಾಗುವುದು ಎಂದು ಡಾ. ಶಾಲಿನಿ ರಜನೀಶ್ ಅವರು ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ.ಆರ್. ರಮೇಶ್ ಅವರು ಮಾತನಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಇಲಾಖೆಯ ಆಯುಕ್ತರಾದ ಸುಭೋದ್ ಯಾದವ್, ಮಿಷನ್ ಡೈರೆಕ್ಟರ್ ರತನ್ ಕೆಳ್‌ಕರ್ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಎಸ್‌ಎಂ:ಕೆಪಿಪಿ:ಜಿಪಿಆರ್.

## <u>ಹಂದಿ ಸಾಕಾಣಿಕೆ ತರಬೇತಿ</u>

ಬೆಂಗಳೂರು, ಮೇ 2 (ಕರ್ನಾಟಕ ವಾರ್ತೆ)

ಹಂದಿ ಸಾಕಾಣಿಕೆ ಕುರಿತು ಆಸಕ್ತಿಯುಳ್ಳ ರೈತರಿಗೆ ರೈತ ಮಹಿಳೆಯರಿಗೆ ಮತ್ತು ನಿರುದ್ಯೋಗಿ ಯುವಕ/ಯುವತಿಯರಿಗೆ 3 ದಿನಗಳ "ಹಂದಿ ಸಾಕಾಣಿಕೆ" ತರಬೇತಿ ಕಾರ್ಯಕ್ರಮವನ್ನು ಹಂದಿ ತಳಿ ಸಂವರ್ಧನಾ ಕ್ಷೇತ್ರ, ಹೆಸರಘಟ್ಟ, ಬೆಂಗಳೂರು –560 089 ಇಲ್ಲಿ ದಿನಾಂಕ 3–5–2017 ರಿಂದ 5–5–2017 ರವರೆಗೆ ಏರ್ಪಡಿಸಲಾಗಿದೆ.

ತರಬೇತಿ ಪಡೆಯಲು ಇಚ್ಛಿಸುವವರು ವಾಸಸ್ಥಳದ ಧೃಢೀಕರಣ ಪ್ರತಿ (ಆಧಾರ್/ಮತದಾರರ ಗುರುತಿನ ಚೀಟಿ ಇತ್ಯಾದಿ) ಮತ್ತು ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ದಿನಾಂಕ: 3–5–2017 ರಂದು ಬೆಳಿಗ್ಗೆ 9–30 ಗಂಟೆಗೆ ನೇರವಾಗಿ ತರಬೇತಿಗೆ ಹಾಜರಾಗಬಹುದು.

ಹೆಚ್ಚಿನ ಮಾಹಿತಿಗಾಗಿ ಕ್ಷೇತ್ರಕ್ಕೆ ನೇರವಾಗಿ ಭೇಟಿ ನೀಡಿ ಅಥವಾ ದೂರವಾಣಿ 28466456 ಮುಖಾಂತರ ಸಂಪರ್ಕಿಸಬಹುದಾಗಿದೆ.

ಎಸ್‌ಎಂ/ಕೆಎಂ

## "ಸ್ವಲ್ಪ ಓದು-ಸ್ವಲ್ಪ ಮೋಜು" ಆಧಾರಿತ "ಬೇಸಿಗೆ ಸಂಭ್ರಮ-2017" ಕಲಿಕಾ ಯೋಜನೆ

ಬೆಂಗಳೂರು, ಮೇ 2 (ಕರ್ನಾಟಕ ವಾರ್ತೆ)

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಹಿರಿಯ ಪ್ರಾಥಮಿಕ ಶಾಲೆಗಳ ಪೈಕಿ 150ಕ್ಕಿಂತಲೂ ಹೆಚ್ಚು ಮಕ್ಕಳಿರುವ ಸುಮಾರು 7049 ಶಾಲೆಗಳನ್ನು ಗುರುತಿಸಿ ಈ ಶಾಲೆಗಳಲ್ಲಿ 2016-17 ನೇ ಸಾಲಿನಲ್ಲಿ 5 ಮತ್ತು 6 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದರೆ 2017-18 ನೇ ಸಾಲಿನಲ್ಲಿ 6 ಮತ್ತು 7 ನೇ ತರಗತಿಗೆ ದಾಖಲಾಗುವ ಮಕ್ಕಳಿಗೆ "ಸ್ವಲ್ಪ ಓದು-ಸ್ವಲ್ಪ ಮೋಜು" ಆಧಾರಿತ "ಬೇಸಿಗೆ ಸಂಭ್ರಮ-2017" ಕಲಿಕಾ ಯೋಜನೆಯನ್ನು ಹಮ್ಮಿಕೊಂಡಿದೆ.

ಮೈಸೂರಿನ ಪ್ರಥಮ್ ಸಂಸ್ಥೆಯ ಸಹಯೋಗದೊಂದಿಗೆ ಕಲಿಕಾ ಸಾಮಾಗ್ರಿಯನ್ನು ಸಿದ್ಧಪಡಿಸಿ ಮತ್ತು ಸರ್ಕಾರಿ ಮುದ್ರಣಾಲಯದ ಮೂಲಕ ಮುದ್ರಿಸಿ ಸರಬರಾಜು ಮಾಡಲಾಗಿದೆ. ಸದರಿ ಕಾರ್ಯಕ್ರಮದ ಮೇಲ್ವಿಚಾರಣೆಗಾಗಿ ಆ್ಯಪ್ ಒಂದನ್ನು ಬೆಂಗಳೂರಿನ ಶಿಕ್ಷಣ ಫೌಂಡೇಶನ್‌ನ ಸಹಯೋಗದೊಂದಿಗೆ ಸಿದ್ದಪಡಿಸಲಾಗಿದೆ.

ಈ ಬೇಸಿಗೆ ಶಿಬಿರವು ದಿನಾಂಕ 17-4-2017 ರಿಂದ ಐದು ವಾರಗಳ ಕಾಲ ನಡೆಯಲಿದ್ದು ಶಿಬಿರಕ್ಕೆ ಹಾಜರಾಗುವ ಮಕ್ಕಳ ಓದುವ ಮತ್ತು ಅಂಕ ಗಣಿತದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ.

ಭಾಷೆಯಲ್ಲಿ ಅರ್ಥ ಗ್ರಹಿಕೆಗೆ ಮತ್ತು ಗಣಿತದಲ್ಲಿ ಅನ್ವಯಕ್ಕೆ ಚಟುವಟಿಕೆಗಳನ್ನು ರೂಪಿಸಲಾಗಿದೆ. ಈ ಚಟುವಟಿಕೆಗಳನ್ನು ಆಯೋಜಿಸಲು ವಾರಕ್ಕೆ ಒಂದರಂತೆ ಚಟುವಟಿಕಾ ಪುಸ್ತಕಗಳನ್ನು ಸಿದ್ದಪಡಿಸಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಾಲೆಗಳಿಗೆ ನೀಡಲಾಗಿದೆ.

ಮೊದಲನೇ ವಾರ ಕುಟುಂಬ, ಎರಡನೇ ವಾರ ನೀರು, ಮೂರನೇ ವಾರ ಆಹಾರ, ನಾಲ್ಕನೇ ವಾರ ಆರೋಗ್ಯ ಮತ್ತು ನೈರ್ಮಲ್ಯ ಹಾಗೂ ಐದನೇ ವಾರ ಪರಿಸರ ವಿಷಯಗಳ ಬಗ್ಗೆ ಚಟುವಟಿಕೆಗಳನ್ನು ಆಯೋಜಿಸಲಾಗುವುದು.

ಮೂರು ಗಂಟೆಗಳ ಅವಧಿಯ ಬೇಸಿಗೆ ಶಿಬಿರವು ಪ್ರತಿ ಮಗುವು ಭಾಗವಹಿಸುವಂತೆ ವೈಯುಕ್ತಿಕ ಮತ್ತು ಗುಂಪು ಚಟುವಟಿಕೆಗಳನ್ನು ಒಳಗೊಂಡಿದೆ. ವಾರದ ಐದು ದಿನಗಳು ಮಕ್ಕಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶವನ್ನು ಮಾಡಿಕೊಡಲಾಗಿದೆ. ವಾರದ ಆರನೇ ದಿನ ವಿದ್ಯಾರ್ಥಿಗಳ ಪೋಷಕರು, ಸಮುದಾಯ ಮತ್ತು ಆಸಕ್ತರು ಶಾಲೆಗೆ ಭೇಟಿ ನೀಡಿ ಮಕ್ಕಳು ಇಡೀ ವಾರದಲ್ಲಿ ಯಾವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ.

ಎಸ್‌ಎಂ/ಕೆಎಂ

## ಪತ್ರಾಗಾರ ಇಲಾಖೆಯಿಂದ 60 ಲಕ್ಷ ಪುಟಗಳ ಐತಿಹಾಸಿಕ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ- ಉಮಾಶ್ರೀ

ಬೆಂಗಳೂರು, ಮೇ 2 (ಕರ್ನಾಟಕ ವಾರ್ತೆ)

ರಾಜ್ಯ ಸರ್ಕಾರದ ಪತ್ರಾಗಾರ ಇಲಾಖೆ ಸುಮಾರು 60 ಲಕ್ಷ ಪುಟಗಳ ಐತಿಹಾಸಿಕ ಮೌಲ್ಯವುಳ್ಳ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದ್ದು ಆ ಪೈಕಿ ಮೊದಲನೇ ಹಂತದಲ್ಲಿ ಐದು ಲಕ್ಷ ಪುಟಗಳ ದಾಖಲುಗಳನ್ನು ಅಂತರ್ಜಾಲದಲ್ಲಿ ವೀಕ್ಷಣೆಗೆ ಲಭ್ಯವಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಅವರು ತಿಳಿಸಿದ್ದಾರೆ.

ವಿಕಾಸ ಸೌಧದಲ್ಲಿ ಇಂದು ಇ–ಆಡಳಿತ ವ್ಯವಸ್ಥೆಗೆ ಚಾಲನೆ ನೀಡಿ ಮಾತನಾಡಿದ ಅವರು ಪತ್ರಾಗಾರ ಇಲಾಖೆಯಲ್ಲಿ ಈ ವ್ಯವಸ್ಥೆ ಪ್ರಪ್ರಥಮ ಭಾರಿಗೆ ಅಳವಡಿಸಲಾಗಿದ್ದು ಇದು ದೇಶದಲ್ಲಿಯೇ ಪ್ರಥಮ ಎನಿಸಿದೆ ಎಂದರು.

ರಾಜ್ಯ ಸರ್ಕಾರ ಎಲ್ಲಾ ಇಲಾಖೆಯ ಎ.ಬಿ.ಸಿ. ವರ್ಗದ ಕಡತಗಳ ನಿರ್ವಹಣೆ ಕಾಗದ ರಹಿತ ವಹಿವಾಟಿನಲ್ಲಿ ಮಾಡಲಾಗುತ್ತಿದೆ. ಇಲಾಖೆಯಲ್ಲಿ ಹಸ್ತಪ್ರತಿ ಆಧಾರಿತ 102 ಪುಸ್ತಕಗಳನ್ನು ಪ್ರಕಟಿಸಲಾಗಿದೆ. ನೂರಕ್ಕೂ ಹೆಚ್ಚು ನಾಡು ನುಡಿ ಸಾಧಕರ ಸ್ವಾತಂತ್ರ ಹೋರಾಟಗಾರರ, ಯೋಧರ ಆಡಳಿತಗಾರರ, ಕಲಾವಿದರ ಧ್ವನಿಯನ್ನು ಸಂಗ್ರಹಿಸಲಾಗಿದ್ದು ಅಂತರ್ಜಾಲದಲ್ಲಿ ಅಳವಡಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಸುಮಾರು 60 ಸಾವಿರ ಪುಟಗಳ ಕನ್ನಡ ಸೇರಿದಂತೆ ವಿವಿಧ ಭಾಷೆಗಳ ದಾಖಲೆಗಳನ್ನು ಲಿಪ್ಯಾಂತರ ಹಾಗೂ ಪ್ರಕಟಣಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇಂಗ್ಲೆಂಡಿನಲ್ಲಿರುವ ಭಾರತದ ಗ್ರಂಥಾಲಯದಲ್ಲಿ ರಾಜ್ಯದ ಇತಿಹಾಸಕ್ಕೆ ಸಂಬಂಧಿಸಿದ 20

ಸಾವಿರ ಪುಟಗಳ ದಾಖಲೆಗಳನ್ನು ಸಂಗ್ರಹಣೆ ಮಾಡಲಾಗಿದ್ದು 72 ಸಂಪುಟಗಳಲ್ಲಿ ಸಂಶೋಧಕರಿಗೆ ಮಾಹಿತಿ ನೀಡಲಾಗಿದೆ ಎಂದರು.

ಹೈದ್ರಾಬಾದ್ ಕರ್ನಾಟಕ ಭಾಗದ ಕಲಬುರಗಿಯಲ್ಲಿ ವಿಭಾಗೀಯ ಮಟ್ಟದ ಕಛೇರಿಯನ್ನು ಆರಂಭಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ ಎಂದ ಸಚಿವೆ ಉಮಾಶ್ರೀ ಅವರು ಐತಿಹಾಸಿಕ ದಾಖಲೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಂಬಂಧ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ನಿವೃತ್ತ ನ್ಯಾಯಾಧೀಶರಾದ ಕೋ. ಚೆನ್ನಬಸಪ್ಪ ಅವರ "UNSUNG FREEDOM STRUGGLE" ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು ಇ-ಆಡಳಿತವನ್ನು ಸದುಪಯೋಗಪಡಿಸಿಕೊಂಡು ಆಡಳಿತ ನಡೆಸಿದಲ್ಲಿ ಆಡಳಿತದಲ್ಲಿ ಪಾರದರ್ಶಕತೆ ತರಬಹುದು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಚಕ್ರವರ್ತಿಮೋಹನ್, ನ್ಯಾಷನಲ್ ಇನ್‌ಫರ್‌ಮ್ಯಾಟಿಕ್ಸ್ ಸಂಸ್ಥೆಯ ಬಿ. ವಿನಯ, ಲಕ್ಷ್ಮೀಶ, ಪತ್ರಾಗಾರ ಇಲಾಖೆಯ ಉಪ ನಿರ್ದೇಶಕರುಗಳಾದ ಅಂಬುಜಾಕ್ಷಿ, ಮಹದೇವಸ್ವಾಮಿ ಅವರು ಹಾಗೂ ಇಲಾಖೆಯ ಸಿಬ್ಬಂದಿ ಹಾಜರಿದ್ದರು.

ಎಸ್‌ಎಂ/ಕೆಪಿಪಿ/ಕೆಎಂ

## ದೂರದರ್ಶನದಲ್ಲಿ ನೆಲದ ಸಿರಿ

ಬೆಂಗಳೂರು, ಮೇ 2 (ಕರ್ನಾಟಕ ವಾರ್ತೆ)

ನೆಲದ ಸಿರಿ ಮಾಲಿಕೆಯಡಿ ಈ ಕೆಳಕಂಡ ಸಂಚಿಕೆಯನ್ನು ಆಯಾ ದಿನಾಂಕದಂದು ಸಂಜೆ 6:00 ರಿಂದ 6:15 ಅವಧಿಯಲ್ಲಿ ಪ್ರಸಾರ ಮಾಡಲಾಗುವುದು.

ದಿನಾಂಕ: 04-05-2017, ಗುರುವಾರ, ಪಂಡಿತ್ ಶ್ರೀ ನರಸಿಂಹಲು ವಡವಾಟಿ, ಕ್ಲಾರೊನೆಟ್ ವಾದಕರು. ದಿನಾಂಕ: 05-05-2017, ಶುಕ್ರವಾರ, ಡಾ॥ ಆರ್. ವಿಶ್ವೇಶ್ವರನ್, ವೀಣಾ ವಾದಕರು. ದಿನಾಂಕ: 08-05-2017, ಸೋಮವಾರ, ಶ್ರೀಮತಿ ಸ್ಮಿತಾ ಬೆಳ್ಳೂರ್, ಹಿಂದುಸ್ಥಾನಿ ಗಾಯಕರು. ದಿನಾಂಕ: 09-05-2017, ಮಂಗಳವಾರ, ಡಾ॥ ಜಯಶ್ರೀ ಅರವಿಂದ, ಸಂಗೀತ ನಿರ್ದೇಶಕರು. ದಿನಾಂಕ: 10-05-2017, ಬುಧವಾರ, ಶ್ರೀಮತಿ ಗುರಮ್ಮ ಹಂಪಯ್ಯ ಸಂಕಿನಮಠ, ಸಮಾಜ ಸೇವಕರು. ದಿನಾಂಕ: 11-05-2017, ಗುರುವಾರ, 700 ಮೆಗಾ ವ್ಯಾಟ್ ಸಾಮರ್ಥ್ಯದ ಬಿ.ಟಿ.ಪಿ.ಎಸ್ ಘಟಕ. ದಿನಾಂಕ: 12-04-2017, ಶುಕ್ರವಾರ, ಶ್ರೀಮತಿ ಹನುಮಾಕ್ಷಿ ಗೋಗಿ, ಸಂಶೋಧಕರು ಮತ್ತು ಶ್ರೀಮತಿ

ರೊಟ್ಟಿ ಮಹಾದೇವಮ್ಮ, ರೊಟ್ಟಿ ಉದ್ಯಮಿ. ದಿನಾಂಕ: 15–04–2017, ಸೋಮವಾರ, ಶ್ರೀಮತಿ ಸರೋಜ ಇಟ್ಟಣ್ಣನವರ್, ಸಾಹಿತಿ, ಮತ್ತು ಶ್ರೀಮತಿ ಶಾಂತವ್ವ ಜಾಲಿಕಟ್ಟಿ, ಪಾರಿಜಾತ ಕಲಾವಿದರು. ಇವರುಗಳ ಕುರಿತು ಸಾಕ್ಷ್ಯಚಿತ್ರಗಳನ್ನು ಪ್ರಸಾರ ಮಾಡಲಾಗುವುದು.